7 ತುಂಗಾ ಮೇಲ್ದಂಡೆ ಯೋಜನೆಯಿಂದ ಬ್ಯಾಡಗಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಬಗ್ಗೆ

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ (ಬ್ಯಾಡಗಿ) ಮಾನ್ಯ ಅಧ್ಯಕ್ಷರೆ, ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಸುಮಾರು 329 ಕಿಲೋಮೀಟರ್ ಉದ್ದದ ಕಾಲುವೆಯನ್ನು ತೋಡಿ ಅದರಿಂದ ಸುಮಾರು 80,494 ಹೆಕ್ಟೇರ್ ಜಮೀನಿಗೆ ನೀರನ್ನು ಕೊಡುವಂಥ ವ್ಯವಸ್ಥೆಯ ಕಾರ್ಯಕ್ರಮ ಈಗಾಗಲೇ ಪ್ರಾರಂಭವಾಗಿದೆ, ಈ ನಿಟ್ಟಿನಲ್ಲಿ ಶಿವಮೊಗ್ಗ ತಾಲ್ಲೂಕಿನ 1806 ಹೆಕ್ಟೇರ್ ಜಮೀನಿಗೆ, ಹೊನ್ನಾಳಿ ತಾಲ್ಲೂಕಿನ 5084 ಹೆಕ್ಟೇರ್, ಹರಿಹರ ತಾಲ್ಲೂಕಿನ 210 ಹೆಕ್ಟೇರ್‌ಗೆ, ಹಿರೇಕೆರೂರು ತಾಲ್ಲೂಕಿನ 9394 ಹೆಕ್ಟೇರ್, ರಾಣಿಬೆನ್ನೂರು ತಾಲ್ಲೂಕಿನ 36276 ಹೆಕ್ಟೇರ್‌ಗೆ, ಹಾವೇರಿ ತಾಲ್ಲೂಕಿನ 25,737 ಹೆಕ್ಟೇರ್‌ಗೆ, ಹಾನಗಲ್ ತಾಲ್ಲೂಕಿನ 1387 ಹೆಕ್ಟೇರ್‌ಗೆ ಈ ರೀತಿ ನೀರನ್ನು ಕೊಡಬೇಕು ಎನ್ನತಕ್ಕ ವ್ಯವಸ್ಥೆಯನ್ನು ಯೋಜನೆಯಲ್ಲಿ ಅಳವಡಿಸಲಾಗಿದೆ

ಇದರ ಮಧ್ಯದಲ್ಲಿರುವ ಬ್ಯಾಡಗಿ ತಾಲ್ಲೂಕನ್ನು ಹೊರತುಪಡಿಸಿ ಉಳಿದೆಲ್ಲಾ ತಾಲ್ಲೂಕುಗಳಿಗೆ ತುಂಗಾ ಬಲದಂಡೆ ಯೋಜನೆಯಡಿ ನೀರಿನ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ ಬ್ಯಾಡಗಿ ತಾಲ್ಲೂಕು ಎತ್ತರ ಪ್ರದೇಶದಲ್ಲಿದೆಯೆಂದು ನೆಪವೊಡ್ಡಿ ಮೀಸಲು ಕ್ಷೇತ್ರವಾದ ಬ್ಯಾಡಗಿಗೆ ಸರ್ಕಾರ ಇವೊತ್ತು ಅನ್ಯಾಯವೆಸಗುತ್ತಿದೆ ಈ ಅನ್ಯಾಯದತ್ತ ಸರ್ಕಾರ ಗಮನಹರಿಸಬೇಕು ಬ್ಯಾಡಗಿ ತಾಲ್ಲೂಕು ಮೆಣಸಿನಕಾಯಿಯ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ಸರ್ಕಾರಕ್ಕೆ ಪ್ರತಿ ವರ್ಷವೂ ಕೋಟ್ಯಾಂತರ ರೂಪಾಯಿಗಳಷ್ಟು ಲಾಭ ಬರುತ್ತಿದೆ ಈ ರೀತಿ ಲಾಭ ತರುತ್ತಿರುವಂತಹ ಬ್ಯಾಡಗಿ ಕ್ಷೇತ್ರದತ್ತ ಗಮನಹರಿಸದೆ ನೀರಾವರಿ ಯೋಜನೆಯಲ್ಲಿ ಇದನ್ನು ಕೈಬಿಟ್ಟಿರುವುದು ಬಹಳ ಅನ್ಯಾಯ ವಾದಂತಾಗಿದೆ ಕ್ಷೇತ್ರದ ಮಧ್ಯಭಾಗದಲ್ಲಿಯೇ ಮುಖ್ಯ ಕಾಲುವೆ ಹರಿದುಹೋಗುತ್ತಿದ್ದರೂ ಸಹ ಬ್ಯಾಡಗಿ ಕ್ಷೇತ್ರವನ್ನು ಕಡೆಗಣಿಸಿ ಅಲ್ಲಿರುವ ಲಕ್ಷಾಂತರ ರೈತರಿಗೆ ಇವೊತ್ತಿನ ದಿವಸ ತೊಂದರೆಯುಂಟು ಮಾಡಿದಂತಾಗಿದೆ, ಮೋಸವೆಸಗಿದಂತಾಗಿದೆ ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ ಯೋಜನೆಯಡಿ ಪಂಪ್‌ನ ಮೂಲಕ ನೀರಿನ ಸೌಲಭ್ಯವನ್ನು ಬ್ಯಾಡಗಿ ಕ್ಷೇತ್ರದ ಕೊನೆಯವರೆಗೂ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಬ್ಯಾಡಗಿ ಕ್ಷೇತ್ರಕ್ಕೆ ನೀರಿನ ಸೌಲಭ್ಯ ಒದಗಿಸಿಕೊಡುವಲ್ಲಿ ಹಿಂದಿನ ಸರ್ಕಾರ ಬಹಳ ಅನ್ಯಾಯವೆಸಗಿದೆ ಕ್ಷೇತ್ರದ ಜನರ ನೀರಿನ ಬವಣೆಯನ್ನು ಆದಷ್ಟು ಬೇಗ ನೀಗಿಸಬೇಕು ಈ ಕ್ಷೇತ್ರಕ್ಕೆ ನೀರಿನ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ತಮ್ಮ ಮೂಲಕ ಈ ಸಂದರ್ಭದಲ್ಲಿ ಅವರನ್ನು ಒತ್ತಾಯಿಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯವನ್ನು ನಾವು ಪರಿಶೀಲಿಸುತ್ತೇವೆ